


## ವಾರದ ಪತ್ರ

### ವಾರಾಂತ್ಯದಲ್ಲಿ ಅವತ್ತೇ ಅಂತ್ಯವಾಗಲಿ...

ವಾರಾಂತ್ಯವೂ ಸೀರಿಯಲ್ ಬರುತ್ತವೆ ಎಂದು ಸ್ಟಾರ್ ಸುವರ್ಣದಲ್ಲಿ ಪ್ರಕಟಣೆಯೊಂದು ಬಂತು. ಅದರಲ್ಲಿ ಮನೆ ಮಂದಿ ಸಮೋಸ ಸವಿಯುತ್ತಾ ನೋಡಿ ಸಂಭ್ರಮಿಸಬಹುದು. ಇದೇನಪ್ಪ ಭಾನುವಾರವೂ ನಮ್ಮ ಮನೆಗೆ ಬಂದು ತೊಂದರೆ ಕೊಡುತ್ತಾರೆ ಎಂದು ಮಕ್ಕಳು ದನಿ ಎತ್ತಿದವು. ಮಕ್ಕಳು ಪೋಷಕರ ಜೊತೆ ಹತ್ತಿರದ ಪಾರ್ಕ್‌ಗೆ ಹೋಗಲು ಆಗುವುದಿಲ್ಲ. ಮನೆಗೆ ಅತಿಥಿಗಳೂ ಬರುವಂತಿಲ್ಲ. ನಾವೂ ಬೇರೆಯವರ ಮನೆಗೆ ಹೋಗುವಂತಿಲ್ಲ. ನಮ್ಮ ಯಜಮಾನರೋ ನೀವೆಲ್ಲ ಟೀವಿ ಮುಂದೆ ಕುಳಿತರೆ ನಿಮ್ಮನ್ನು ನೋಡುತ್ತಾ ಕುಳಿತುಕೊಳ್ಳಲೇ ಎಂದು ಶನಿವಾರ, ಭಾನುವಾರ ಸ್ನೇಹಿತರನ್ನು ಹುಡುಕಿಕೊಂಡು ಹೊರಗೆ ಹೋಗಲು ನೆಪ ಸಿಕ್ಕಂತೆ ಆಯಿತು. ಇದಕ್ಕೆ ಮಕ್ಕಳು ಅಂಟಿಕೊಂಡರೆ ಗತಿಯೇನು? ಇದರ ಬದಲು ಅವತ್ತಿನ ದಿನವೇ ಮುಗಿಯುವ ಕಾರ್ಯಕ್ರಮವೇ ವಾರಾಂತ್ಯ ಉತ್ತಮ ಎಂದು ಅನ್ನಿಸಿತು.

—ಕೆ.ಎಲ್. ರಮಾಮಣಿ, ಬೆಂಗಳೂರು

### ಬಂಗಾರದ ಭಾಗ್ಯ

‘ನನಗೆ ಚಿನ್ನ, ಬಂಗಾರಿ ಎಂದು ಕರೆದರಷ್ಟೇ ಆಗೋದಿಲ್ಲಾರೀ, ಆಗಾಗ ಅಲ್ಪ ಸ್ವಲ್ಪ ಬಂಗಾರ ತಗೊಬೇಕ್ರಿ’ ಅಂತ ನನ್ನ ಗಂಡಂಗೆ ಹೇಳಿದ್ರೆ, ಅಯ್ಯೋ ಮಾರಾಯ್ತಿ ಬಂಗಾರದ ಬೆಲೆ ಕೇಳಿದರೆ ಮೈ ಜುಂ ಅನ್ನುತ್ತೇ’ ಎಂದು ದನಿ ಎಳೆದು ‘ಒಂದು ಕೆಲ್ಸ ಮಾಡು. ಟೀವಿಯಲ್ಲಿ ಬರುವ ಎಲ್ಲ ಧಾರಾವಾಹಿಗಳನ್ನು ಸಂಜೆಯಿಂದ ರಾತ್ರಿವರೆಗೂ ನೋಡ್ತಿಯ, ನಿನಗೆ ಬಂಗಾರ ಬೇಕು ಅಂದ್ರೆ, ಕಲರ್ಸ್ ಕನ್ನಡದ ‘ಕರಿಮಣಿ’, ‘ದೃಷ್ಟಿ ಬೊಟ್ಟು’, ‘ಭಾಗ್ಯಲಕ್ಷ್ಮಿ’, ‘ಲಕ್ಷ್ಮೀ ಬಾರಮ್ಮ’, ‘ನಿನಗಾಗಿ’, ‘ನೂರು ಜನ್ಮಕೂ’, ‘ರಾಮಾಚಾರಿ’, ‘ವಧು’, ‘ಯಜಮಾನ’ ನೋಡ್ತಾ ನೋಡ್ತಾ ಅವರು ಕೇಳುವ ಪ್ರಶ್ನೆಗಳಿಗೆ ಸರಿ ಉತ್ತರಕ್ಕೆ ಸೂಚಿಸಿದ ಮೊಬೈಲಿಗೆ ಮಿಸ್ಡ್ ಕಾಲ್ ಕೊಡು ಪ್ರತಿ ಅರ್ಧ ಗಂಟೆಗೊಮ್ಮೆ ಒಂದು ಗ್ರಾಂ ಚಿನ್ನದ ನಾಣ್ಯ ಕುಳಿತಲ್ಲೇ ಸಂಪಾದಿಸಬಹುದು.

ಅಷ್ಟೇ ಅಲ್ಲ. ಸ್ಪರ್ಧೆಯಲ್ಲಿ ಹೇಗೆ ಭಾಗವಹಿಸಬೇಕೆಂದು ಹೇಳಿದರು. ಹಾಗೆಯೇ ಬೇಗ ರಾತ್ರಿಗೆ ಅಡುಗೆ ಮಾಡಿ ಮೊಬೈಲ್ ಇಟ್ಟುಕೊಂಡು ಮಿಸ್ಡ್ ಕಾಲ್ ಮಾಡ್ತಾ ಇದ್ದೀನಿ. ಯಾವ ಖರ್ಚೂ ಇಲ್ಲದೆ ಚಿನ್ನದ ಮನರಂಜನೆ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದೇನೆ. ಚಿನ್ನದ ನಿರೀಕ್ಷೆಯಲ್ಲಿರುವ ನಾನು ಸತ್ಯಾಸತ್ಯತೆ ತಿಳಿಯಬೇಕಾಗಿದೆ.

—ಅನುರಾಧ ಟಿ., ದಾವಣಗೆರೆ

### ಕನ್ನಡ ಪದಗಳಿಗೆ ಜಾಗೃತಿ ಬೇಕು!

ಖಾಸಗಿ ವಾಹಿನಿಗಳು ಕನ್ನಡ ಪದಗಳ ಉಳಿವಿಗೆ ಗಮನಹರಿಸಬೇಕಾಗಿದೆ. ಸಾಮಾನ್ಯವಾಗಿ ಖಾಸಗಿ ವಾಹಿನಿಗಳಲ್ಲಿ ಇಂಗ್ಲಿಷ್ ಪದಗಳು ಮಿತಿಮೀರುತ್ತಿವೆ. ಸುದ್ದಿ ಕಾರ್ಯಕ್ರಮಗಳಿಗೆ ‘ಬಿಗ್ ಇಂಪ್ಯಾಕ್ಟ್, ಬಿಗ್ ರಿಪೋರ್ಟ್, ಗುಡ್ ನ್ಯೂಸ್, ಬ್ರೇಕಿಂಗ್ ನ್ಯೂಸ್, ಎಕ್ಸ್‌ಕ್ಲೂಸಿವ್, ಲೈವ್, ಸೇಫ್, ಬಿಗ್ ರಿಲೀಫ್...’ ಹೀಗೆ ಇಂಗ್ಲಿಷ್ ಪದಗಳನ್ನು ಬಳಸುವುದು ಸಾಮಾನ್ಯವಾಗಿದೆ. ಇದರ ಬದಲು ಕನ್ನಡ ಬಳಸಲು ಸಾಧ್ಯ ಇಲ್ಲವೇ? ಹೀಗೇ ಆದರೆ ಕನ್ನಡ ಪದಗಳ ಗತಿ ಏನಾಗಬೇಕು?

—ಸಿ. ಸಿದ್ದರಾಜು ಆಲಕೆರೆ, ಮಂಡ್ಯ

### ಸರಿಗಮಪದ ಗಾಯನ ಸರಣಿ

ಝೀ ಕನ್ನಡದ ‘ಸರಿಗಮಪ’ದಲ್ಲಿ ತೀರ್ಪುಗಾರರಾದ ಸಾಧುಕೋಕಿಲ, ಹರಿಕೃಷ್ಣ ಅವರ ಆಗಮನ ವಿಶೇಷವಾಗಿತ್ತು. ಸಾಧುಕೋಕಿಲ ಹಾಸ್ಯ ದಿಗ್ಗಜ ಮಾತ್ರ ಅಲ್ಲ, ಗೀತರಚನೆ ಮತ್ತು ಗಾಯಕರೂ ಹೌದು. ಹರಿಕೃಷ್ಣ ಅವರು ತುಂಬಾ ಸುಂದರ ಹಾಡುಗಳನ್ನು ಸಂಯೋಜಿಸಿದ್ದಾರೆ. ಅವರ ರಚನೆಯ ಹಾಡುಗಳನ್ನು ಸ್ಪರ್ಧಿಗಳು ಹಾಡಿ ರಂಜಿಸಿದರು.

—ಭಾರತೀ ಗಂಗಾಧರ್, ಬೆಂಗಳೂರು

### ಹುಚ್ಚಾಟವೇ ರಿಯಾಲಿಟಿ

ಟೀವಿ ಚಾನಲ್‌ಗಳಲ್ಲಿ ಒಳ್ಳೆಯ ಸಿನಿಮಾಗಳಿಗೆ ಬರವೇ? ಕೆಲವನ್ನು ಪದೇ ಪದೇ ಪುನರಾವರ್ತನೆ ಮಾಡುತ್ತಾರೆ. ಇಲ್ಲದಿದ್ದಲ್ಲಿ ಇತರೆ ಭಾಷೆಯ ಡಬ್ಬಿಂಗ್ ಹಾಕುತ್ತಾರೆ. ಚಂದನದಲ್ಲಿ ‘ಶುಭ ಮಂಗಳ’ ಚಿತ್ರ ಇತ್ತೀಚೆಗೆ ಪ್ರಸಾರವಾಯಿತು. ಕಲರ್ಸ್ ಕನ್ನಡದಲ್ಲಿ ಎರಡು ರಿಯಾಲಿಟಿ ಶೋಗಳು ಪ್ರಸಾರ ಆಗುತ್ತಿವೆ. ಅವೆರಡರಲ್ಲೂ ಹುಚ್ಚಾಟವೇ ಮನರಂಜನೆ ಎಂಬುದು ರಿಯಾಲಿಟಿ ಅನ್ನುವಂತೆ ಆಗಿದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

### ಗಾಯನ ಶುಭೋದಯ

ಚಂದನದ ‘ಶುಭೋದಯ ಕರ್ನಾಟಕ’ ಕಾರ್ಯಕ್ರಮದಲ್ಲಿ ಅಪರ್ಣಾ ನರೇಂದ್ರ ಅತಿಥಿಯಾಗಿ ಆಗಮಿಸಿದ್ದರು. ಸುಗಮ ಸಂಗೀತ ಕಲಾವಿದರಾದ ಅವರು ದೀಕ್ಷಿತರ ಕೀರ್ತನೆ, ಅಖಿಲಾಂಡೇಶ್ವರಿ ಹಾಗೂ ಡಿವಿಜಿ ಅವರ ಕಗ್ಗದ ಪದ್ಯವನ್ನು ಸುಶ್ರಾವ್ಯವಾಗಿ ಹಾಡಿದರು. ನಿಜಕ್ಕೂ ಸುಂದರ ಶುಭೋದಯ.

—ಕಮಲಾ ರಾವ್, ಬೆಂಗಳೂರು

### ಕೀರ್ತಿಯ ಕಲಶವೇರಲಿ

ಚಂದನದ ‘ಶುಭೋದಯ ಕರ್ನಾಟಕ’ದಲ್ಲಿ ತನ್ವಿರಾವ್ ಸಂದರ್ಶನ ತುಂಬ ಚೆನ್ನಾಗಿ ಮೂಡಿಬಂದಿತು. ಕಲರ್ಸ್ ಕನ್ನಡದ ‘ಲಕ್ಷ್ಮೀಬಾರಮ್ಮ’ದಲ್ಲಿ ಅವಳ ನೃತ್ಯ–ಅಭಿನಯ ಕಂಡು ಮೆಚ್ಚುಗೆ ಆಗುತ್ತಿತ್ತು. ಅಬ್ದುಲ್ ಕಲಾಂ ಅವರು ಆಕೆಯನ್ನು ಗುರುತಿಸಿ ಪತ್ರ ಬರೆದಿರುವುದು ಸಂಗತಿ ತಿಳಿದು ತುಂಬ ಸಂತೋಷವಾಯಿತು.

ಬಾಲ್ಯದಿಂದ ಶಿಕ್ಷಣದ ಜೊತೆ ನೃತ್ಯ ಅಭಿನಯದಲ್ಲೂ ಪರಿಣತಳಾದ ತನ್ವಿ ಕೀರ್ತಿಯ ಉತ್ತುಂಗಕ್ಕೆ ಏರಲಿ ಎಂದು ಬಯಸುವೆ.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

### ಅಣಯ್ಯನಂತಹ ಅಣ್ಣ ಬೇಕು

ಝೀ ಕನ್ನಡದ ‘ಅಣ್ಣಯ್ಯ’ದ ಶಿವು ನೋಡಿದ್ರೆ ತುಂಬ ಖುಷಿ ಆಗುತ್ತದೆ. ಅವನಿಗೆ ತಂಗಿಯರ ಮೇಲೆ ಎಲ್ಲಿಲ್ಲದ ಪ್ರೀತಿ. ಎಲ್ಲಾ ಹೆಣ್ಣು ಮಕ್ಕಳಿಗೂ ಶಿವುನಂತಹ ಅಣ್ಣ ಇರಬೇಕು ಎಂದೆನಿಸುತ್ತದೆ. ಆಸರೆಗೂ ಬೇಸರಕ್ಕೂ ಶಾಶ್ವತ ತವರಿನ ನೆನಪು ಮರೆಯದ ಅಣ್ಣನ ಹಂಬಲದಲ್ಲಿ.

—ಚಾಂದಿನಿ, ಬೆಂಗಳೂರು